(ಅಧ್ಯಕ್ಷರು)

Now, I will put the Report to the Vote of the House.

The question is :

"That this Assembly agrees with the Twelfth Report of the Committee on Private Members Bills and Resolutions."

The motion was adopted.

Business of the House

Mr. SPEAKER.—Three days have been allotted for debates on Motion of thanks to the Governor's Address and 23rd January is the last day. According to the recommendation of the Business Advisory Committee which has been accepted by the House the debate should proceed up to 6 p.m. to-day and thereafter the Government's reply should begin. Now it is not possible to go according to that programme. I would like to put this matter before the Business Advisory Committee, and place its recommendations before the House. As the time at our disposal is short, I would like to put time limit on the speakers. Ten minutes will be given to each member, with another one or two minutes this side or that side. By and large each hon. Member should make up their mind to finish within that time.

ಶ್ರೀ ಎಸ್. ಗೋಪಾಲಗೌಡ.—ನಿಯಮಾವಳಿಯ ನಡೆವಳಿಕೆಗಳನ್ನು ಪ್ರಾರಂಭದಿಂದ ಕೊನೆಯವರೆಗೂ ಒಂದೇ ರೀತಿ ಅನುಸರಿಸುವುದು ಸಂಪ್ರದಾಯ. ಆದರೆ ಮೂರು ದಿನ ಮುಗಿದಮೇಲೆ ತಾವು ಈ ರೀತಿ ಜಜ್ಮೆಂಟ್ ಕೊಟ್ಟಿರುವುದನ್ನು ನೋಡಿ ನನಗೆ ಗಾಭರಿಯಾಯಿತು.

Mr. SPEAKER.—We shall discuss that piont also in the Business Advisory Commitee.

Sri H. M. CHANNABASAPPA.—Sir, is it possible to cover a 60 page address of the Governor in 10 minutes? Ten minutes is not sufficient even to glance at it. Particularly, for me it is immpossible. This being a very important issue on which policies and programmes have got to be thrashed out, it is impossible to cover it in 10 minutes. If the Speaker were to put the time-limit of 10 minutes, I am afraid we may have to keep quiet rather than participate in the debate. It would not be correct on the part of the Chair to prescribe any time limit for us.

[MR. DEPUTY SPEAKER in the Chair]

Motion of Thanks to the Governor's Address

(*Debate continued*)

Sri N. B. SIRDESAI (Khanapur).—Mr. Deputy Speaker, Sir, I rise to make certain observations on the Address of the Governor of Mysore

delivered to the members of the Legislature. Generally, the Governor's Address is considered to be the stock-taking or the assessment of the work or the progress achieved by the Government. Certainly, it should not be a repetition of the works or the policies or the assurances. But, in this Address, there is repetition of assurances and policies, which is bound to remain on paper only and it will not be put into practice. In his Address he has stated that less than 25 per cent of the villages had inadequate and untimely rains. I should say that he had no exact knowledge of the situation because about 50 per cent of the villages have been affected on account of inadequate and untimely rains and there was failure of crops in those villages. On the assumption or misapprehension that only 25 per cent of the villages had inadequate rainfall, he has stated that the gap between supply and demand is being narrowed. But really speaking, the gap is being widened because there was failure of crops. As per the promise given last year, the Government should have abolished the levy system. But the levy is being recovered as a result of which the agriculturists are finding it difficult to pull on. The prices of essential commodities have gone up but the procurement prices of agricultural produce have come down and the agriculturists are hard hit.

Sir, the Governor has taken pride that the Government addressed itself pertinently to the problems of toning up administration and that an Efficiency Research Bureau has been set up under the direct control and supervision of the Chief Secretary for improving the efficiency. He has also stated that a Training programme has been arranged for imparting training to the officials. He should not have taken pride in saying so about the problems of toning up administration. Administration is going from bad to worse, because all the files are being accumulated and they are not disposed of in time. Matters are delayed for months together and kept pending. The Chief Secretary has no knowledge as to how matters are delayed and kept pending. Even then, it is a pity that an Efficiency Research Bureau has been set up under his supervision. How is it possible for him to know about the pending matters? What is the use of imparting training to the officers of the Secretariat without changing their minds? If the training were to be useful for disposing of pending matters, there should be a national outlook. Unless the national outtook is changed, unless their mind is changed and unless morality is followed or raised, it is impossible to improve them and it is impossible to dispose of pending matters.

Further, he has expressed great anxiety on the recommendations of the Mahajan Commission. He has stated that it is a source of concern to his Government and the people of Mysore. I fail to understand why he should think so. If the Commission has submitted incorrect, one-sided or baseless or unprincipled report, whoever the Commission may be, them it must go to the wastepaper basket, and it is bound to go to the waste-paper basket, because Shri Mehr Chand Mahajan had submitted one-sided, incorrect and unprincipled report. I wonder why the Governor, who has been appointed by the President of India, should have a provincial and narrow outlook in saying that it should be treated

(SHRI N. B. SIRDESAI)

as an Award. A baseless report cannot be treated as an Award. Shri Mahajan himself had never said that it should be treated as an award, and even the Central Government have never said that it should be treated as an award. It is only a recommendation and not an award, and it is for the Central Government to decide on just principles. It is no use expressing such things on the Floor of the House.

As regards Land Reforms and Revenue Administration he has stated that a State Level Committee presided over by the Chief Minister has been set up to periodically review the practical results achieved and examine how the pace of efficiency of these measures can be increased. It is no use constituting a State Level Committee. I suggest that District Level and Taluk Level committees should be formed and then only efficiency could be achieved. To ensure fair and rapid distribution of Government land available for cultivation, Consultative Committees are being set up. But, the Government have failed to release the land for cultivation. They should first release the land and then constitute a committee for distribution purposes.

It is stated that Government have made arrangements to print over 10 lakhs Patta Books for distribution to the land holders at nominal price. The Hon. Minister concerned inaugurated the issue of bound Patta Books ceremony. But, so far the Patta books have not been distributed. It is well and good only for publicity purposes that patta bound books are being distributed to the landholders.

Further the Governor has stated that the Executive and Judiciary powers are being separated and the powers are being transfered to the Tahsildars and it is really good for minimising the burden of work and the step taken by the Government, in this direction, it is quite appreciable.

The Government has now come forward to transfer the ownership of lands to the tenants. I feel that this decision should have been taken by the Government long back.

As regards unemployment problem, it is stated that various measures are being devised to tackle the problem of unemployment. But I fail to understand what measures the Government have taken because this problem has not been solved by this Government. Even the best qualified persons have not been provided with employment. A student in my constituency who has secured first class and first rank in the whole of the State who submitted several representations for appointment has not been able to get an appointment so far and also that he has not been awarded the prize and the Government is showing partial treatment because he is a Marathi student.

Then Sir, it is stated in the Governor's Address that 18 per cent of the building sites are being reserved for the Scheduled Castes and Scheduled Tribes people. It is a commendabla and appreciable measure. But I would like to suggest to the Government that these sites should

be provided in such places as to enable the backward community people to live with other communities, so that the communal feelings could be avoided.

In regard to basic requirement of finance, the Governor has stated that several Commercial Banks have come forward to give loans for purchase of tractors and I.P. Sets, etc. But these Commercial Banks which have been nationalised recently are not advancing loans to the agriculturists, since there are so many practical difficulties in the way of granting loans. Unless the procedure of granting loans by these Commercial Banks is simplified the agriculturists will not get the loan. In my taluka the State Bank of India has not shown any progress in this behalf and they have not advanced loans to agriculturists. In fact many other banks like the Canara Bank and the Syndicate Bank, etc., are really advancing loans but the State Bank of India has failed to discharge its duties.

It is stated in the Governor's Address that for soil testing some laboratories have been set up. But in Belgaum District the Government has failed to set up a laboratory. Only a mobile laboratory is moving and in a short time it cannot test the soil of the whole area. It is very difficult for the mobile laboratory van to complete the soil testing operations and therefore, I would like to suggest to the Government, that there should be one soil testing laboratory for each district.

Sir, the forest lands are not being released though there is a demand for that. In spite of the fact that cultivable lands are available and repeated representations have been submitted to the Government forest lands have not been released for cultivation purposes. It is really good that the entire revenue collection is being given to the Panchayat Raj Institutions. It is also appreciable that Zilla Parishads will be introduced shortly.

As regards water supply schemes it is stated that about 2.10 crores of rupees are going to be spent and totally 124 schemes have already been taken up. In this connection I would like to suggest that the percentage of contribution by ryots and Local Bodies should be reduced to 5 per cent and Government should not insist upon payment of contribution in lumpsum. It should be taken by instalments. Just for the sake of publicity and to please the people, it is stated in the Governor's Address that financial assistance to the tune of 75 crores of rupees is provided for medium and short term loans. I fail to understand whether this would be accomplished and whether this benefit would go to the cultivatiors.

As regards education, I would like to say that uniform text-books have been introduced throughout the State. It is really a good idea. But I am very sorry to place before this House that these text-books are not made available before the commencement of the academic year and for the first two to three months the books are not at all supplied. Therefore I request that the books should be supplied well before the commencement of the academic year.

(SRI N. B. SIRDESAI)

In regard to appointment of trained graduate teachers in Taluk Schools, I would like to mention, that in my taluk the Government has not appointed a trained teacher there.

For the welfare of the youth some prizes are being awarded to the Scheduled Caste students and to other students who secure first rank throughout the State, etc. As I stated earlier that one student from my constituency who secured first class first rank in the Polytechnic last year has not been given any prize, merely because, he is a marathi speaking student. The Government is thus showing partiality towards Marathi speaking students.

Then Sir, irrigation works are not being taken up in Belgaum and Khanapur taluks because they are Marathi speaking areas. These taluks have been completely ignored by the Government.

As regards power supply, the road side villages which are closed to the existing electric lines have not been electrified. Only villages which are Kannada-speaking areas have been electrified. Though a meeting was convened by the Deputy Minister for Minor Irrigation and Electricity and the representations submitted was accepted by him, in spite of that, orders to supply power to the Marathi speaking villages have not been issued yet. Even the supply of I.P. sets to these villages are being delayed.

In regard to frequent failure of electricity I would suggest that a strict warning should be issued to the Mysore State Electricity Board for discharging their duties promptly.

Sir, in my constituency, we are badly in need of roads for communications. Our area is forest-covered area and it has been neglected very much. Fifty per cent of the funds are being consumed by the departmental people and the contractors. If they decide to honestly spend the money and not to misuse Government funds then only they can carry out good and efficient work. But I am very sorry to say that fifty per cent of the amount is being misused by the Public Works Department. The Public Works Department should be toned-up properly and public funds spent honestly. The Public works Department has been the greatest enemy of the Nation.

With these words, I think the Chair and conclude.

3-00 P.M.

† ಶ್ರೀ ಬಿ. ಎಂ. ಸಾಣಿಕೊಪ್ಪ (ಕಿತ್ತೂರು).—ಸಭಾಪತಿಗಳೇ, ನಾನು ರಾಜ್ಯಪಾಲರು ಮಾಡಿದಂಥ ಈ ಭಾಷಣಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತೇನೆ, ಅದನ್ನು ಸ್ವಾಗತಿಸುತ್ತೇನೆ. ನಿಜವಾಗಿಯೂ ರಾಜ್ಯಪಾಲರು 60 ಪುಟಗಳ ಭಾಷಣದಲ್ಲಿ ಬಹಳ ಮಹತ್ವದ ಅಂಶಗಳು ಇವೆ ಎಂದು ನಾನು ಅತ್ಯಂತ ಅಭಿನಂದನಾಪೂರ್ವಕವಾಗಿ ಹೇಳುತ್ತೇನೆ. ನಿಜವಾಗಿಯೂ ನಮ್ಮ ಸರಕಾರದವರು ವರ್ಷವರ್ಷಕ್ಕೂ ರಾಜ್ಯದ ಹಿತ ರಕ್ಷಿಸುವುದರಲ್ಲಿ ಮತ್ತು ಅಭಿವೃದ್ಧಿ ಮಾಡುವಲ್ಲಿ ಮುಂದಾಗಿದ್ದಾರೆ ಎಂದು ನಾನು ಅತ್ಯಂತ ಆನಂದದಿಂದ ಹೇಳುತ್ತೇನೆ. ನಮ್ಮ ಸರಕಾರದವರು ಎರಡನೇ ಸರಕಾರಗಳು ಮಾಡದೇ ಇರುವಂಥ ಕೆಲಸಗಳನ್ನು ಮಾಡುತ್ತಿದ್ದಾರೆ ಎಂದು ತಿಳಿದುಕೊಳ್ಳಬೇಕು. ಎಷ್ಟೋ ದಿವಸಗಳಿಂದ ತುಕೋಳ್ ಕಮಿಷನ್ ಬಗ್ಗೆ ಎಷ್ಟೋವಾದ ವಿವಾದಗಳು ಇದ್ದುವು.

ಕೊನೆಗೆ ಸರಕಾರದವರು ಎಷ್ಟೇ ಕಷ್ಟವಾದರೂ ಸಹ ತುಕೋಳ್ ಕಮಿಷನ್ ಶಿಫಾರಸುಗಳ ಬಹು ಭಾಗವನ್ನು ಜಾರಿಗೆ ತಂದಿದ್ದಾರೆ. ಇದರಿಂದ 10 ಕೋಟಿ ರೂಪಾಯಿಗಳಷ್ಟು ಹೆಚ್ಚು ಖರ್ಚಾಗುತ್ತದೆ. ಇದರಿಂದ ನಮ್ಮ ರಾಜ್ಯದಲ್ಲಿ ಇರುವಂಥ ಕೆಳತರಗತಿಯ, ಮಧ್ಯಮ ತರಗತಿಯ ನೌಕರರಿಗೆ ಅನೇಕ ಅನುಕೂಲಗಳನ್ನು ಕಲ್ಪಿಸಲು ಸರಕಾರದವರು ಅನುವು ಮಾಡಿಕೊಟ್ಟಿದ್ದಾರೆಂದು ಈ ಸಂದರ್ಭದಲ್ಲಿ ಸರಕಾರಕ್ಕೆ ಅಭಿನಂದಿಸುತ್ತೇನೆ. ರಾಜ್ಯಪಾಲರು ತಮ್ಮ ಭಾಷಣದಲ್ಲಿ ಮಹಾರಾಷ್ಟ್ರ ಮೈಸೂರು ರಾಜ್ಯಗಳ ಮತ್ತು ಮೈಸೂರು ಕೇರಳ ರಾಜ್ಯಗಳಿಗೆ ಇರುವ ಗಡಿ ವಿವಾದದಲ್ಲಿ ನ್ಯಾಯ ನಿರ್ಣಯ ಕೊಡುವುದಕ್ಕಾಗಿ 1966ರಲ್ಲಿ ಏಕಸದಸ್ಯ ಆಯೋಗವಾಗಿ ನಿಯುಕ್ತರಾಗಿದ್ದ ಮಹಾಜನ್ ಶಿಫಾರಸುಗಳು ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ, ತೀವ್ರ ಬರಬೇಕು ಅದನ್ನು ಡಿಲೇ ಮಾಡಬಾರದೆಂದು ಹೇಳಿದರು. ನಿಜವಾಗಿ ಈ ಪ್ರಶ್ನೆಯನ್ನು ಬಗೆಹರಿಸುವುದರಲ್ಲಿ ಕೇಂದ್ರ ಸರ್ಕಾರದವರು ತಡ ಮಾಡಬಾರದಾಗಿತ್ತು. ಬಹಳ ದಿನಗಳ ಹಿಂದೆಯೇ ವಾದವಿವಾದಗಳಾಗಿ ಎಲ್ಲರೂ ಒಪ್ಪಿ ಕೊಂಡಂತೆ ಮಹಾಜನ್ ಒಬ್ಬ ಮನುಷ್ಯರ ಸಮಿತಿಯನ್ನು ಕೇಂದ್ರಸರಕಾರದವರು ನೇಮಿಸಿದರು. ಅದರಿಂದ ಬರುವಂಥ ನಿರ್ಣಯವನ್ನು ಎರಡು ಸರ್ಕಾರಗಳೂ ಮತ್ತು ಕೇಂದ್ರ ಸರ್ಕಾರದವರೂ ಕಾರ್ಯರೂಪದಲ್ಲಿ ತರಬೇಕೆಂದು ಹೇಳಿತು. ಆದರೂ ನಮ್ಮ ಸರಕಾರದವರು ಮಹಾಜನ್ ಸಮಿತಿಯ ರಿಪೋರ್ಟನ್ನು ಆಧಾರವಾಗಿ ಇಟ್ಟುಕೊಂಡು, ಮಹಾಜನ್ ಸಮಿತಿ ರಿಪೋರ್ಟ್ ಪ್ರಕಾರ ತೀವ್ರಕಾರ್ಯಾಚರಣೆ ಮಾಡಬೇಕೆಂದು ಕೇಂದ್ರಸರಕಾರವನ್ನು ಪದೇ ಪದೇ ಕೇಳುತ್ತಲೇ ಇದ್ದರೂ, ಕೇಂದ್ರ ಸರಕಾರವು ಅದನ್ನು ಏನೂ ಒಂದು ಕಾರ್ಯಾಚರಣೆಯಲ್ಲಿ ತಾರದೆ ಇರುವುದು ದುಃಖದ ಮಾತು, ಖೇದದ ಮಾತು; ಅತ್ಯಂತ ಕ್ಲೇಶಮಯವಾದ ಮಾತು. ಬೆಳಗಾಂ ಪ್ರಶ್ನೆಯನ್ನು ಇಬ್ಭಾಗ ಮಾಡಿ ಬೆಳಗಾವಿನ ಕೆಲವು ಭಾಗ ಮಹಾರಾಷ್ಟ್ರಕ್ಕೆ ಕೊಟ್ಟು ಕೆಲವು ಭಾಗ ಕರ್ನಾಟಕಕ್ಕೆ ಕೊಟ್ಟು ಈ ಪ್ರಶ್ನೆಯನ್ನು ಬಿಡಿಸಬೇಕೆಂದು ಮೇಲಿನ ಲೆವಲ್‌ನಲ್ಲಿ ನಡೆದಿದೆ ಎಂದು ಕೇಳುತ್ತೇನೆ. ಇದು ನಿಜವಾಗಿಯೂ ದುಃಖದ ಮಾತು. ಆ ರೀತಿ ಮಾಡಬಾರದು. ಕೇಂದ್ರಸರಕಾರದವರು ಮಹಾಜನ್ ಸಮಿತಿಯ ವರದಿ ಬಿಟ್ಟು ಮತ್ತೊಂದು ನಿರ್ಣಯವನ್ನು ಕಾರ್ಯಾಚರಣೆಗೆ ತರುವಲ್ಲಿ ಇದರಿಂದ ಮೈಸೂರು ರಾಜ್ಯದಲ್ಲಿ ದೊಡ್ಡ ಕೋಲಾಹಲ ಏಳುತ್ತದೆ ಎನ್ನುವ ಮಾತನ್ನು ತಿಳಿದುಕೊಳ್ಳಬೇಕು. ನಿಜವಾಗಿ ಬೆಳಗಾಂ ಇಬ್ಭಾಗ ಮಾಡಿದ್ದೇ ಆದರೆ ಮಹಾಜನ್ ಸಮಿತಿ ರಿಪೋರ್ಟ್ ಪ್ರಕಾರ ಕಾರ್ಯಾಚರಣೆ ಮಾಡದೇ ಇದ್ದರೆ ಹಿಂದೆ ಯಾವ ಪ್ರಕಾರ ಈ ಒಂದು ಗಡಿ ಆಂಧೋಲನಕ್ಕಾಗಿ ಮೈಸೂರು ರಾಜ್ಯದಲ್ಲಿ ಚಳುವಳಿನಡೆಯಿತೋ ಅದಕ್ಕಿಂತ ಉಗ್ರವಾದ ಚಳುವಳಿಯನ್ನು ಮಾಡಲು ಕರ್ನಾಟಕ ಜನತೆ ಮುಂದು ಬರುತ್ತದೆ ಎನ್ನುವ ಮಾತು ಹೇಳುತ್ತೇನೆ. ನಮ್ಮ ವಿರೋಧಪಕ್ಷದ ಸದಸ್ಯರಾದ ಮರಾಠಿ ಮಿತ್ರರು ಮರಾಠಿ ಭಾಗದಲ್ಲಿ ಯಾವುದೇ ರೀತಿಯ ಸುಧಾರಣೆ ಕಂಡಿಲ್ಲ, ಮೈಸೂರು ಸರಕಾರ ಎಲೆಕ್ಟ್ರಿಸಿಟಿ ಕೊಟ್ಟಿಲ್ಲ. ಐ. ಪಿ. ಸೆಟ್ ಕೊಟ್ಟಿಲ್ಲ, ಯಾವುದೇ ರೀತಿಯ ಕಾರ್ಯಾಚರಣೆ ಮಾಡುತ್ತಾ ಇಲ್ಲ ಎಂದು ಹೇಳುತ್ತಾರೆ. ಕಾನಪುರದವರು ಯಾವ ಭಾಗದಿಂದ ಅವರು ಬರುತ್ತಾರೆ, ನಾನೂ ಕೂಡ ಅದೇ ಭಾಗದಿಂದ ಬರುತ್ತೇನೆ. ಕನ್ನಡ ಭಾಗದ ಎಷ್ಟು ಊರುಗಳಿಗೆ ಎಲೆಕ್ಟ್ರಿಸಿಟಿ ಕೊಟ್ಟಿದ್ದಾರೋ ಅಷ್ಟೇ ಮರಾಠಿ ಊರುಗಳಿಗೆ ಖಾನಾಪುರ, ನಂದಗಡ, ಹೆಬ್ಬಳ, ಲೋಂಡ ಮತ್ತು ಗುಂಜಿಯಲ್ಲಿ ಎಲೆಕ್ಟ್ರಿಸಿಟಿ ಕೊಟ್ಟಿದ್ದಾರೆ. ಆದುದರಿಂದ ಆ ನೆಪಮಾಡಿಕೊಂಡು ಅಡ್ಡಿ ಮಾಡಬಾರದೆಂದು ಹೇಳುತ್ತೇನೆ. ಮರಾಠಿ ಜನರಿಗೆ ಪ್ರಾಶಸ್ತ್ಯ ಸಿಕ್ಕಿಲ್ಲ ಎನ್ನುವುದನ್ನು ನಾನು ಒಪ್ಪುವುದಿಲ್ಲ. ಬೆಳಗಾಂಗೆ ಎಷ್ಟೋ ಅನುಕೂಲತೆಗಳನ್ನು ಸರಕಾರ ಮಾಡಿಕೊಟ್ಟಿದೆ. 10 ವರ್ಷಗಳ ಹಿಂದೆ ಬೆಳಗಾಂ ಯಾವ ಸ್ಥಿತಿಯಲ್ಲಿ ಇತ್ತು, ಈಗ ಯಾವ ಸ್ಥಿತಿಯಲ್ಲಿ ಇದೆ ಎನ್ನುವುದನ್ನು ನೋಡಬೇಕು. ಮರಾಠಿ ಪ್ರದೇಶವಾದ ಕೊಲ್ಹಾಪುರದಲ್ಲಿ ಅಕ್ಕಿ ಕಿಲೋಗೆ 3 ರೂಪಾಯಿನಂತೆ ಮತ್ತು ಒಂದು ಕಿಲೋ ಜೋಳಕ್ಕೆ ಎರಡು ರೂಪಾಯಿನಂತೆ ಮಾರುತ್ತಿದ್ದಾರೆ. ನಮ್ಮಲ್ಲಿ ಅಂಥಹ ಪರಿಸ್ಥಿತಿ ಇಲ್ಲ. ಆದುದರಿಂದ ಕೇಂದ್ರ ಸರಕಾರದವರು ಬೇರೆ ಯಾವರೀತಿಯ ಗೊಂದಲಕ್ಕೂ ಆಸ್ಪದ ಕೊಡದೆ ಮಹಾಜನ್ ಸಮಿತಿಯ ವರದಿಯನ್ನು ತೀವ್ರ ಕಾರ್ಯಾಚರಣೆಗೆ ತರಬೇಕೆಂದು ಹೇಳುತ್ತೇನೆ.

ಈಗ ಭೂಸುಧಾರಣೆ ಬಗ್ಗೆ ಕೆಲವು ಮಾತುಗಳನ್ನು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಭೂಸುಧಾರಣೆ ಬಗ್ಗೆ ಇದ್ದಂಥ ಎಷ್ಟೋ ಟೆನೆಂಟಿಗೆ ಸಂಬಂಧಪಟ್ಟ ಕೇಸುಗಳು ಇವೆ. ಅವುಗಳನ್ನು ತೀವ್ರ ತೀರಿಸಬೇಕು. ಮುನ್‌ಸೀಫರನ್ನು ನೇಮಿಸಿದ್ದಾರೆ. ಅವರು ತೀವ್ರ ಕಾರ್ಯಮಾಡುವಂತೆ ಸರಕಾರ ಕ್ರಮ ಕೈಕೊಳ್ಳಬೇಕು. ಇಲ್ಲದಿದ್ದರೆ ರೈತರಿಗೂ ಮಾಲೀಕರಿಗೂ ಬಹಳ ಮಟ್ಟಿಗೆ ತೊಂದರೆಯಾಗುತ್ತದೆ. ಈ ತೊಂದರೆ ತೀವ್ರವಾಗಿ ಕಮ್ಮಿ ಆಗಬೇಕು ಎಂದು ಹೇಳುತ್ತೇನೆ.

ಇನ್ನು ಪೆರಿಯಾಪಟ್ಟಣದ ಸಮೀಪದಲ್ಲಿ ಭೂರಹಿತರಿಗೆ ಪುನರ್ವಸತಿ ಒದಗಿಸುವ ಯೋಜನೆ ಒಂದನ್ನು ಸರಕಾರ ಕೈಕೊಂಡಿದೆ. ಅದೇ ಪ್ರಕಾರ ಖಾನಾಪುರ ತಾಲ್ಲೂಕದಲ್ಲಿಯೂ ಕಾರವಾರ ಜಿಲ್ಲೆಯಲ್ಲಿಯೂ ಇಂತಹ ಪುನರ್‌ವಸತಿಗಳನ್ನು ಸ್ಥಾಪನೆಮಾಡಲು ಸಾಧ್ಯ ಇದೆ. ಅಲ್ಲಿ ನದಿಗಳು

(ಶ್ರೀ ಬಿ. ಎಂ. ಸಾಣಿಕೊಪ್ಪ)

ಇವೆ, ನೀರು ಇದೆ, ಅಲ್ಲಿ ಫಾರೆಸ್ಟ್ ಲ್ಯಾಂಡ್ ಉಪಯೋಗ ಮಾಡಿಕೊಂಡು ವಸತಿಗಳನ್ನು ಏರ್ಪಾಡು ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಈಗ ಸಮಾಜ ಕಲ್ಯಾಣ ಶಾಖೆಯಲ್ಲಿ ಅಬಲರಿಗೆ, ಹರಿಜನ, ಗಿರಿಜನರಿಗೆ 100ಕ್ಕೆ 10 ರಂತೆ ನಿವೇಶನಗಳನ್ನು ಕೊಡಬೇಕೆಂದು ಹೇಳಿದ್ದಾರೆ. ಅದು ಸಾಲದು ; ಪ್ರತಿ ಊರಿನಲ್ಲಿ ಹರಿಜನರಿಗೆ ಗಿರಿಜನರಿಗೆ ಮನೆಗಳು ಸಿಕ್ಕುವಂತೆ ಸರಕಾರದವರು ತೀವ್ರ ಕ್ರಮ ಕೈಕೊಳ್ಳಬೇಕೆಂದು ಹೇಳುತ್ತೇನೆ.

ವ್ಯವಸಾಯ ಇಲಾಖೆಯಲ್ಲಿ ಹೈಬ್ರಿಡ್ ಬೀಜ ದೊರಕಲು ಸರಕಾರದವರು ಅನೇಕ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಇದರ ಜೊತೆಗೆ ಜನರ ಒಕ್ಕಲುತನದ ಉತ್ಪನ್ನ ಬೆಳಸಲಿಕ್ಕೆ ತೀವ್ರ ಕ್ರಮ ಕೈಕೊಳ್ಳಬೇಕು. ರಿಗ್‌ಮಿಷಿನ್, ಬ್ಲಾಸ್ಟಿಂಗ್ ಮಿಷಿನ್, ಐ. ಪಿ. ಸೆಟ್ ಇವುಗಳಿಗೆ ಸರಕಾರದವರು ಹೆಚ್ಚಿನ ಪ್ರಾಶಸ್ತ್ಯ ಕೊಟ್ಟು ಅವು ರೈತರಿಗೆ ಸಿಗುವಂತೆ ಮಾಡಿದರೆ ಒಕ್ಕಲುತನ ಅಭಿವೃದ್ಧಿ ಆಗುತ್ತದೆ ಎಂದು ಹೇಳುತ್ತೇನೆ. ಮಾನ್ಯ ಚನ್ನೇಗೌಡರು ಕಬ್ಬಿನ ರಿಸರ್ಚ್ ಸ್ಟೇಷನ್ ಇಲ್ಲ ಎಂದು ಹೇಳಿದರು. ಸಂಕೇಶ್ವರ ಅರಭಾವಿ, ಹೆಬ್ಬಾಳ ಮತ್ತು ಮಂಡ್ಯದಲ್ಲಿ ಇಂತಹ ಕಬ್ಬಿನ ರಿಸರ್ಚ್ ಸ್ಟೇಷನ್ ಅವೆ. ಇನ್ನೂ ಹೆಚ್ಚು ರಿಸರ್ಚ್ ಸ್ಟೇಷನ್ ಆಗಬೇಕು. ಆದರೆ ಅವರು ಹೇಳಿರುವುದು ಸರಿಯಿಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದರಲ್ಲಿ ಒಂದು ಹೈರ್ ಪರ್‌ಚೇಸ್‌ನಲ್ಲಿ ಟ್ರಾಕ್ಟರುಗಳನ್ನು ಪರ್‌ಚೇಸ್‌ಮಾಡುವಾಗ ಎರಡು ಅಥವಾ ಎರಡೂವರೆಸಾವಿರ ರೂಪಾಯಿಗಳಷ್ಟು ಸಾ೯ಬ್ಸಿಡಿ ಫೀ ಆಗುತ್ತದೆ. ಇದನ್ನು ಟ್ರಾಕ್ಟರುಗಳಿಗೆ ಅನ್ವಯಿಸಬಾರದೆಂದು ಹೇಳುತ್ತೇನೆ.

ಇನ್ನೊಂದು ಮಾತು. ಆಹಾರಧಾನ್ಯಗಳು ಕೆಲವು ಜಿಲ್ಲೆಯಿಂದ ಜಿಲ್ಲೆಗೆ ಹೋಗಬೇಕಾದರೆ ಈಗ ಇನ್ನೂ ಕೆಲವು ಕಂಟ್ರೋಲ್‌ಗಳಿವೆ. ಆದ್ದರಿಂದ ಈ ಕಂಟ್ರೋಲ್‌ಗಳು ಪೂರ್ತಿವಾಗಿ ಹೋಗಬೇಕು. ಮದ್ರಾಸ್ ಸರ್ಕಾರದವರು ಈಗಾಗಲೇ ಅದನ್ನು ತೆಗೆದುಹಾಕಿದ್ದಾರೆ. ಬೇಕಾದಷ್ಟು ಧಾನ್ಯ ಸಂಗ್ರಹಣೆಗೆ ಅನುಮತಿಕೊಟ್ಟು ಅನಾವಶ್ಯಕವಾದಂಥ ಕಂಟ್ರೋಲಿಗೆ ಅಲ್ಲಿ ಅವಕಾಶವಿಲ್ಲ. ನಮ್ಮ ರಾಜ್ಯದಲ್ಲಿಯೂ ಆಹಾರೋತ್ಪನ್ನ ಸಾಕಷ್ಟು ಆಗುತ್ತಿದೆ ದಪ್ಪಕ್ಕಿ ವಿಷಯದಲ್ಲಿ ನಾವು ಸಮರ್ಥರಾಗಿದ್ದೇವೆಂದು ರಾಷ್ಟ್ರಪಾಲರ ಭಾಷಣದಲ್ಲಿದೆ. ಬೆಂಗಳೂರು ಮತ್ತು ಕೆ. ಜಿ. ಎಫ್. ಇವುಗಳ ಪೂರೈಕೆಗೆ ಅದು ಸಂಬಂಧವಿಲ್ಲ. ಇಡೀ ರಾಜ್ಯದಲ್ಲಿ ಕಂಟ್ರೋಲ್ ಇರುವುದು ಅವಶ್ಯಕವಿಲ್ಲ.

ಇನ್ನು ಈಗ ವಾಟರ್ ಸಪ್ಲೈ ಸ್ಕೀಮುಗಳು ತಯಾರಾಗಿವೆ, ಅವನ್ನು ಬಂದ್ ಮಾಡದೆ ತೀವ್ರವಾಗಿ ಮುಗಿಸುವ ಹಾಗೆ ಚಾಲ್ತಿ ಇಡಬೇಕು. ಮನೆನಾಡಿನ ಭಾಗದಲ್ಲಿ ನೀರು ಸರಬರಾಜು ಯೋಜನೆಗಾಗಿ ಆಯಾ ಸ್ಥಳೀಯ ಸಂಸ್ಥೆಗಳು ಶೇಕಡ 10 ರಷ್ಟು ವಂತಿಗೆಯನ್ನು ಕೊಡಬೇಕೆಂದು ಹೇಳಿದ್ದಾರೆ. ಅದನ್ನು ಶೇಕಡ 5ರಷ್ಟಕ್ಕೆ ಇಳಿಸಬೇಕೆಂದು ನಾನು ಹೇಳುತ್ತೇನೆ. 3600 ಗ್ರಾಮಗಳಲ್ಲಿ ಒಂದು ಬಾವಿಯೂ ಇಲ್ಲ. ಎಲ್ಲ ಕಡೆಗಳಲ್ಲಿಯೂ ಬಾವಿಗಳು ಒಂದೇ ವರ್ಷದಲ್ಲಿಯೇ ಆಗುವುದಕ್ಕೆ ಸರ್ಕಾರದವರು ಕ್ರಮ ತೆಗೆದುಕೊಳ್ಳಬೇಕು. ಕೆಲವು ಕಡೆ ಬಾವಿಗಾಗಿ ಕಂಟ್ರಾಕ್ಟ್ ಕೊಟ್ಟಿದ್ದರೆ, ಅಂತಹ ಕಡೆಗಳಲ್ಲಿ ಅರ್ಧಬಾವಿಗಳನ್ನು ತೆಗೆದಿದ್ದಾರೆ. ಅವನ್ನು ಪೂರ್ಣವಾಗಿ ತೆಗೆಯುವುದಕ್ಕೆ ಅವಕಾಶ ಮಾಡಿಕೊಡಬೇಕು. ಪಂಚಾಯತಿ ರಾಜ್ಯದಲ್ಲಿ ಅಲ್ಲಿನ ಸೆಕ್ರೆಟರಿಗಳಿಗೆ ಸರ್ಕಾರದ ನೌಕರರಂತೆ ಅನುಕೂಲಗಳನ್ನು ಕಲ್ಪಿಸಿಕೊಡಬೇಕು. ಅವರನ್ನು ಮೂರು ವರ್ಷಗಳಿಗೊಂದು ಸಾರಿ ವರ್ಗಮಾಡಬೇಕು. ಇನ್ನು ಸಹಕಾರ ಸಂಘಗಳಲ್ಲಿ ಸಾಕಷ್ಟು ರಾಭವಾಗಿಲ್ಲ. ಆದ್ದರಿಂದ ಅನೇಕ ಸೊಸೈಟಿಗಳು ಪುನರುದ್ಧಾರ ಮಾಡಬೇಕು. ಆ ವಿಷಯದಲ್ಲಿ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಮುಖಾಂತರ ಸಾಲಗಳನ್ನು ಒದಗಿಸಿಕೊಡಬೇಕು. ಈಗ ಅಗ್ರಿಕಲ್ಚರಲ್ ರಿಫೈನಾನ್ಸಿಂಗ್ ಕಾರ್ಪೊರೇಷನ್ ಮುಖಾಂತರ ಹೆಚ್ಚಿಗೆ ಸಾಲಗಳನ್ನು ಒದಗಿಸಿ ಲಿಫ್ಟ್ ಇರಿಗೇಷನ್ನಿಗೆ ಅನುಕೂಲ ಮಾಡಿಕೊಡಬೇಕು. ನದೀ ದಂಡೆಗಳು ಮತ್ತು ಹಳ್ಳದ ದಂಡೆಗಳು ಇದ್ದಲ್ಲ ಅಂತಹ ಕಡೆಗಳಲ್ಲಿ ಲಿಫ್ಟ್ ಇರಿಗೇಷನ್ ಆಗಬೇಕೆಂದು ಹೇಳುತ್ತೇನೆ.

ಇನ್ನೊಂದು ವಿಷಯ. ವಿದ್ಯಾಭ್ಯಾಸದ ಬಗ್ಗೆ ಹೇಳುವುದಾದರೆ ಇನ್ನು ಮುಂದೆ ಪದವೀಧರ ಶಿಕ್ಷಕರನ್ನು ಪ್ರಾಥಮಿಕಶಾಲೆಗಳಲ್ಲಿ ನೇಮಿಸುತ್ತೇವೆಂದು ಹೇಳುತ್ತೀರಿ. ಆದ್ದರಿಂದ ತೀವ್ರವಾಗಿ ಪದವೀಧರರನ್ನೇ ಪ್ರಾಥಮಿಕ ಶಾಲೆಗಳಲ್ಲಿ ನೇಮಿಸಬೇಕೆಂದು ನಾನು ಹೇಳುತ್ತೇನೆ. ಯಾರು ಖಾನಗೀ ಹೈಸ್ಕೂಲುಗಳನ್ನು ಪ್ರೈವೇಟಾಗಿ ಮ್ಯಾನೇಜ್‌ಮೆಂಟ್ ಮಾಡುತ್ತಿದ್ದಾರೋ ಅಂತಹವರಿಗೆ ಪಿ. ಡಬ್ಲ್ಯು. ಡಿ. ರೇಟ್ ಪ್ರಕಾರ ರೆಂಟ್ ಕೊಡಬೇಕೆಂದು ಮಾಡಬೇಕು.

ಇನ್ನು ನೀರಾವರಿ ಯೋಜನೆಗಳ ಬಗ್ಗೆ ಹೇಳುವುದಾದರೆ ಸರ್ಕಾರದವರು ಆ ಯೋಜನೆಗಳನ್ನು ತೀವ್ರವಾಗಿ ಕೈಗೊಳ್ಳಬೇಕು. ಖಾನಾಪುರ, ಸೌಂದತ್ತಿ ಮತ್ತು ಬೆಳಗಾಂ ತಾಲ್ಲೂಕುಗಳಲ್ಲಿ

ಒಂದು ಯೋಜನೆಯನ್ನು ಮಾಡಿದ್ದಾರೆ. ಸರ್ಕಾರದವರು ಅಸೋಗಾ ಯೋಜನೆಗೆ ಮತ್ತೆ 4 ಕೋಟಿ ರೂಪಾಯಿಗಳಷ್ಟು ಖರ್ಚು ಬೀಳುತ್ತದೆ, ಆದರಿಂದ 40 ಸಾವಿರ ಎಕರೆಗಳಿಗೆ ನೀರಾವರಿ ಯಾಗುತ್ತದೆಂದು ಈಗ ಅಂದಾಜು ಮಾಡಿರುವರು. ಅದನ್ನು ತೀವ್ರವಾಗಿ ಕೈಗೊಳ್ಳಬೇಕು. ಆದರಿಂದ ಉಪಯುಕ್ತತೆ ಆಗುತ್ತದೆಂದು ಹೇಳಬಯಸುವೆ.

ಇನ್ನು ವಿದ್ಯುಚ್ಛಕ್ತಿ ಬಗ್ಗೆ ಹೇಳುವುದಾದರೆ, ಅದು ನಮ್ಮಲ್ಲಿ ಸರ್ಪ್ಲಸ್ ಇದ್ದರೂ ಬೇರೆ ಪ್ರಾಂತಗಳಿಗೆ ಅದನ್ನು ಕೊಡುವುದರಿಂದ ಬಹಳ ತೊಂದರೆಯಾಗುತ್ತದೆ. ಹೆಚ್ಚಿಗೆ ಹೊರ ಪ್ರಾಂತ ಗಳಿಗೆ ಮಾರುವುದರಿಂದ ನಮಗೆ ಮುಂದೆ ವಿದ್ಯುಚ್ಛಕ್ತಿಯ ಕೊರತೆ ಬೀಳಬಹುದು. ಒಟ್ಟಿನಲ್ಲಿ ಐ. ಪಿ. ಸೆಟ್ಟುಗಳಿಗೋಸ್ಕರ ಮತ್ತು ರೂರಲ್ ಎಲೆಕ್ಟ್ರಿಫಿಕೇಷನ್ನಿಗೋಸ್ಕರ ವಿದ್ಯುಚ್ಛಕ್ತಿಯನ್ನು ಹೆಚ್ಚಿಗೆ ಕೊಡಬೇಕೆಂದು ನಾನು ಈ ಸಂಧರ್ಭದಲ್ಲಿ ಹೇಳುತ್ತೇನೆ.

ಇನ್ನು ಗ್ರಾಮಾಂತರ ರಸ್ತೆಗಳ ಬಗ್ಗೆ ಸರ್ಕಾರದವರು ಹೆಚ್ಚು ಲಕ್ಷ್ಯ ಕೊಡಬೇಕೆಂದು ಹೇಳುತ್ತೇನೆ. ನಿಜವಾಗಿ 20 ವರ್ಷಗಳಾದರೂ ಗ್ರಾಮಾಂತರ ಪ್ರದೇಶಗಳಲ್ಲಿ ಇನ್ನು ಹೆಚ್ಚು ಹೆಚ್ಚಾಗಿ ದವಾಖಾನೆಗಳು ಆಗಿದ್ದರೂ ರಸ್ತೆಗಳು ಸಾಕಷ್ಟು ಇಲ್ಲದೇ ಇರುವುದು ಬಹಳ ದುಃಖವಿದೆ. ಈ ವಿಚಾರದಲ್ಲಿ ಸರ್ಕಾರದವರು ತಕ್ಕ ಕ್ರಮ ತೆಗೆದುಕೊಳ್ಳುತ್ತಾರೆಂದು ನಾನು ನಂಬಿರುತ್ತೇನೆ.

ಕೊನೆಯದಾಗಿ ನನಗೆ ಅವಕಾಶವನ್ನು ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ಎನ್. ನಂಜೇಗೌಡ (ಅರಕಲಗೂಡು).—ಮಾನ್ಯ ಸಭಾಪತಿಗಳೇ, ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಅರ್ಪಿಸುವುದಕ್ಕೆ ನನಗೆ ಸಾಕಷ್ಟು ಅವಕಾಶವಿಲ್ಲವೆಂದು ನಾನು ವಿಷಾದಿಸ ಬೇಕಾಗಿದೆ ಕಾರಣವೇನೆಂದರೆ, ಪೊಟ್ಟಪೊದಲನೆಯದಾಗಿ ಈ ಸಭೆಯಲ್ಲಿ ಮಸೂದೆಗಳು ಯಾವ್ಯಾ ವುದು ಬರುತ್ತವೆ, ಖಾನಗಿ ಸದಸ್ಯರು ಏನೇನು ಕೊಟ್ಟಿದ್ದಾರೆಂಬುದನ್ನು ಸರ್ಕಾರ ಗಮನಕ್ಕೆ ತೆಗೆದುಕೊಳ್ಳಲಿಲ್ಲ. ಈ ರಾಜ್ಯಪಾಲರ ಭಾಷಣದಲ್ಲಿ ಏನೂ ತಿರುಳಿಲ್ಲವೆಂದು ಹೇಳದೆ ಗತ್ಯಂತರವಿಲ್ಲ. ಸರ್ಕಾರದವರು ಹೇಳಿಕೊಟ್ಟಂಥ ಗಿಳೀಪಾಠವನ್ನು ಅವರು ನಮ್ಮ ಮುಂದೆ ಮಂಡಿಸಿದ್ದಾರೆ. ರಾಜ್ಯಪಾಲರಿಗೆ ಈ ಸಭೆಯನ್ನು ಉದ್ದೇಶಿಸಿ ಭಾಷಣ ಮಾಡತಕ್ಕ ಅಧಿಕಾರವನ್ನು ರಾಜ್ಯಾಂಗ ದಲ್ಲಿ ಕೊಟ್ಟಿದ್ದರೂ ಅವರು ಇಲ್ಲಿ ಅನ್ಯಯರ್ ವರದಿಯನ್ನು ಕೊಟ್ಟ ಹಾಗೆ ಕೊಟ್ಟಿದ್ದಾರೆ. ಆ ರೀತಿ ಕೊಡುವುದು ರಾಜ್ಯಾಂಗ ಮಾಡಿದವರ ಅಭಿಪ್ರಾಯವಾಗಿಲ್ಲ. ಬಹುಶಃ ಅದಕ್ಕಿಂತ ಘನತರ ವಾದ ಕಾರ್ಯವನ್ನು ಅವರು ಮಾಡಬಹುದಾಗಿತ್ತು. ಮುಂದಿನ ವರ್ಷಕ್ಕೆ ಮಾರ್ಗ ದರ್ಶನ ಹಾಕಿ ಹಿಂದಿನ ವರ್ಷದಲ್ಲಿ ತಪ್ಪುಗಳು ಏನೇನಿವೆ ಎಂಬುದನ್ನು ಹೇಳತಕ್ಕ ಕರ್ತವ್ಯ ರಾಜ್ಯಪಾಲರಿಗೆ ಇದೆ. ರಾಜ್ಯಾಂಗ ಮಾಡಿದವರ ಮನಸ್ಸಿನಲ್ಲಿ ಇದ್ದಂಥ ಅಭಿಪ್ರಾಯವನ್ನು ರಾಜ್ಯಪಾಲರು ಏನೂ ಹೇಳಲಿಲ್ಲ. ಇದು ದುಃಖಕರವಾದ ವಿಷಯ. ಸರ್ಕಾರದವರು ಅನ್ಯಯರ್ ರಿಪೋರ್ಟ್‌ನಲ್ಲಿ ಏನೇನು ಕೊಟ್ಟಿದ್ದಾರೋ ಅಂಥಾದ್ದನ್ನು ತಮ್ಮ ಭಾಷಣದಲ್ಲಿ ಸೂಡಿಸಿ ಭಾರೀ ನಿರಾಶೆಯನ್ನುಂಟುಮಾಡಿದ್ದಾರೆ. ರಾಜ್ಯಪಾಲರು ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಡಬೇಕಾಗಿತ್ತು. ಉದಾಹರಣೆಗೆ ಹೇಳುವುದಾದರೆ, ಕೆಲವಾರು ಸಂಧರ್ಭಗಳಲ್ಲಿ ಕಾನೂನನ್ನು ಮೀರಿ ಸರ್ಕಾರ ನಡೆದಿರುವ ಬಗ್ಗೆ ಮಾನ್ಯ ಶ್ರೀ ಚನ್ನಬಸಪ್ಪನವರು ಹೇಳಿದ ಹಾಗೆ ಅನೇಕ ದಾಖ ಲಾತಿಗಳು ಇವೆ. ಪೊಟ್ಟಪೊದಲನೆಯದಾಗಿ ನಾನು ಹೇಳಬೇಕಾದರೆ 1968ನೇ ಮಾರ್ಚ್ 21ನೇ ತಾರೀಖಿನಲ್ಲಿ ಮಂಗಳೂರಿನ ಫರ್ಟಿಲೈಜರ್ಸ್ ಫ್ಯಾಕ್ಟರಿಯಲ್ಲಿ ವಾಟರ್ ಸಪ್ಲೈ ಸ್ಕೀಂ ಬಗ್ಗೆ ಉತ್ತರ ಕೊಡುತ್ತಾ 1969ನೇ ಏಪ್ರಿಲ್ ತಿಂಗಳಲ್ಲಿ ಈ ಕೆಲಸ ಪ್ರಾರಂಭವಾಗುತ್ತದೆಂದು ಈಗಿನ ಮುಖ್ಯ ಮಂತ್ರಿಗಳು ಆಗ ಲೋಕೋಪಯೋಗಿ ಸಚಿವರಾಗಿ ಒಂದು ಮಾತನ್ನು ಹೇಳಿದ್ದರು. ಇದರ ಕಂಟ್ರಾಕ್ಟನ್ನು ಜರ್ನಿಸ್ಟ್ ಮನಿ ಡಿಪಾಜಿಟ್ ಮತ್ತು ಫಿಕ್ಸೆಡ್ ಡಿಪಾಜಿಟ್ ಇಲ್ಲದೆಯೇ 19 ಲಕ್ಷ ರೂಪಾಯಿಗಳನ್ನು ಕ್ಯಾಷ್ ಅಡ್ವಾನ್ಸಾಗಿ ಇಂಜನಿಯರಿಂಗ್ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಲಿಮಿಟೆಡ್, ಮದ್ರಾಸ್ ಮತ್ತು ಇಂಡಿಯನ್ ಹ್ಯೂಂ ಪೈಪ್ ಕಂಪನಿ, ಬೊಂಬಾಯಿ ನವರಿಗೆ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಅದು 1969ನೇ ಮಾರ್ಚ್ 3ರಲ್ಲಿ ಇದೆ. 1968ನೇ ಮಾರ್ಚ್ 21 ರಲ್ಲಿ ಈಗಿನ ಮುಖ್ಯಮಂತ್ರಿಗಳು ಪಿ. ಡಬ್ಲ್ಯು. ಡಿ. ಮಂತ್ರಿಗಳಾಗಿ ಒಂದು ಮಾತನ್ನು ಅಪ್ಪಣೆ ಕೊಡಿಸಿದರು. ಅದು ಈ ರೀತಿ ಇದೆ.

ಮಂಗಳೂರಿನಲ್ಲಿ ಫರ್ಟಿಲೈಜರ್ಸ್ ಫ್ಯಾಕ್ಟರಿ ಪ್ರಾರಂಭಮಾಡುವುದಕ್ಕೆ ಕೇಂದ್ರ ಸರ್ಕಾರದವರು ಮುಂದೆ ಬಂದಿದ್ದಾರೆ. 1969ನೇ ಏಪ್ರಿಲ್ ತಿಂಗಳಿನಲ್ಲಿ ಈ ಫ್ಯಾಕ್ಟರಿ ಕೆಲಸ ಪ್ರಾರಂಭವಾಗಬೇಕಾ ಗಿದೆ. ಆದುದರಿಂದ 1968ನೇ ಡಿಸೆಂಬರು ತಿಂಗಳ ಕೊನೆಯ ಒಳಗಾಗಿ ವಾಟರು ಸಪ್ಲೈ ಕೊಡ ಬೇಕು.

(ಶ್ರೀ ಎಚ್. ಎನ್. ನಂಜೇಗೌಡ)

ಇವತ್ತು ಇದರಲ್ಲಿ ಸ್ಪಜನ ಪಕ್ಷಪಾತ ನಡೆದಿದೆ ಎಂದು ನಾನು ಹೇಳಬೇಕಾಗಿದೆ. ಇದರ ಬಗ್ಗೆ ಸರ್ಕಾರಕ್ಕೆ ಬಹಳ ಕಾರಣಗಳು ಇರಬಹುದು. 1968ನೇ ಡಿಸೆಂಬರ್‌ನಲ್ಲಿ ಈ ಕಾರ್ಖಾನೆಗೆ ನೀರು ಕೊಡಿಸುತ್ತೇನೆಂದು ಆಗಲೇ ಮಾನ್ಯ ಶ್ರೀ ವೀರೇಂದ್ರಪಾಟೀಲರು ಹೇಳಿದರು. 1969ನೇ ಮಾರ್ಚ್ 3ರಲ್ಲಿ ಲೋಕೋಪಯೋಗಿ ಸಚಿವರಾದ ಮಾನ್ಯ ಶ್ರೀ ಲಕ್ಕಪ್ಪನವರು ನಾನು ಕೇಳಿದ ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ ಕೇಂದ್ರ ಸರ್ಕಾರದವರು ಈ ಕಾರ್ಖಾನೆಯನ್ನು ಪ್ರಾರಂಭಮಾಡುತ್ತಾರೆಂದು ಅಪ್ಪಣೆ ಕೊಡಿಸಿದರು. ಈಗ ಫರ್ಟಿಲೈಜರ್ಸ್ ಫ್ಯಾಕ್ಟರಿ, ಮಲಬಾರ್ ಕೆಮಿಕಲ್ಸ್ ಅವರು ಪ್ರಯತ್ನಪಟ್ಟಿದ್ದಾರೆ. ಕೇಂದ್ರ ಸರ್ಕಾರದವರು ಲೈಸನ್ಸ್ ಕೊಟ್ಟಿದ್ದಾರೆಯೇ ಎಂದು ಕೇಳಿದ್ದಕ್ಕೆ ಹೌದು, ಕೊಟ್ಟಿದಾರೆಂದು ಮಾನ್ಯ ಶ್ರೀ ಲಕ್ಕಪ್ಪನವರು ತಾರೀಖು 3-3-69ರಲ್ಲಿ ಒಪ್ಪಿಕೊಂಡಿದ್ದಾರೆ. ನಾನು ಏಕೆ ಹೇಳುತ್ತಿದ್ದೇನೆಂದರೆ, ನಾವು ಇವತ್ತು ಜನವರಿ 1970ನೇ ಇಸವಿಯಲ್ಲಿದ್ದೇವೆ. 68ನೇ ಇಸವಿಯ ಕೊನೆಯಲ್ಲಿ ನೀರು ಕೊಡಬೇಕೆಂದು ರಾಜ್ಯ ಸರ್ಕಾರದವರು ಹೇಳಿದ್ದರು, ಮತ್ತು ಕೊಡದಿದ್ದರೆ ಫ್ಯಾಕ್ಟರಿ ಪ್ರಾರಂಭವಾಗುವುದಿಲ್ಲವೆಂದು ಹೇಳಿದವರು ಈಗ ಏನಾಯಿತು? ನೀರು ಕೊಡುವುದು ಎಲ್ಲಿ ಹೋಯಿತು? ಫ್ಯಾಕ್ಟರಿ ಪ್ರಾರಂಭ ಮಾಡುವುದು ಏನಾಯಿತು? ಅದರ ಲೈಸೆನ್ಸ್ ಬಗ್ಗೆ ಏನಾಯಿತು? ಎಂದು ಕೇಳಬೇಕಾಗಿದೆ. ಇವತ್ತು ರಾಜ್ಯ ಸರ್ಕಾರದ ಬೊಕ್ಕಸದ ಹಣವನ್ನು ಇಂಜಿನಿಯರಿಂಗ್ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ಗೆ ಕೊಡಬೇಕಾದರೆ ಮುಖ್ಯಮಂತ್ರಿಯವರಿಗೆ ಅದರಲ್ಲಿ ಒಬ್ಬ ಮನುಷ್ಯ ನೆಂಟನಾಗಿದ್ದಾನೆ. ಅದರ ಮ್ಯಾನೇಜಿಂಗ್ ಡೈರೆಕ್ಟರ್ ಶಂಕರ್ ಜೈನ್ ಯವರು ಇವರ ನೆಂಟರಾಗಿದಾರೆ. ಅದಕ್ಕೋಸ್ಕರ ಈ ರೀತಿ ಇವರು ಮಾಡುತ್ತಿದ್ದಾರೆ. ಇದರಿಂದ ನಾನು ಕಿಂದೆ ಏನು ಹೇಳಿದ್ದೆ, ಅದು ಈಗ ಖಚಿತವಾದ ಹಾಗೆ ಆಯಿತು. ಅವರ ಮೋಟೀವ್ ಏನು ಇತ್ತು, ಅದು ಈಗ ಖಚಿತವಾಗುತ್ತದೆ. ಇವರು ರಾಜ್ಯಸರ್ಕಾರದ ಹಣವನ್ನು ತಮ್ಮ ಪಿತ್ರಾರ್ಜಿತ ಆಸ್ತಿಯೆಂದು ಉಪಯೋಗಿಸುತ್ತಿದ್ದಾರೆ. ಹೀಗೆ ಇದ್ದರೆ ನಾವು ಸುಮ್ಮನೆ ಬಿಡುವುದಿಲ್ಲ.

ಬೆಂಗಳೂರಿನ ಸಿವರೇಜ್ ಕಂಟ್ರಾಕ್ಟ್‌ಗೆ ಎಂಟೂವರೆ ಕೋಟಿಯ ಟೆಂಡರ್ ಇದ್ದರೂ 13 ಕೋಟಿಯ ಟೆಂಡರ್ ತಗೆದುಕೊಂಡಿದ್ದಾರೆ. ಇದನ್ನು ಈ ಇಂಜಿನಿಯರಿಂಗ್ ಕಾರ್ಪರೇಷನ್‌ನವರಿಗೆ ಕೊಡಬೇಕಾದರೆ, ಅವರ ಮ್ಯಾನೇಜಿಂಗ್ ಡೈರೆಕ್ಟರ್ ಇವರ ನೆಂಟ ಆಗಿರುವುದರಿಂದ ಅಲ್ಲವೇ? ಇದನ್ನು ನಾನು ಚಾರ್ಜ್ ಮಾಡುತ್ತೇನೆ. ಇವರ ಸಂಬಂಧದವರಿಗೆ, ಇವರ ಜನರಿಗೆ ಅನುಕೂಲ ಮಾಡಬೇಕೆಂದು ಮಾಡುವುದಲ್ಲದೆ ಬೇರೇನೂ ಅಲ್ಲ. Any reasonable man cannot believe that the Government is so gracious to advance crores of rupees without any gratification. I cannot trust. I am not one to trust anything and everything that this Government do. ಇದರಲ್ಲಿ ಇವರಿಗೆ ಪಾಲು ಇದ್ದಿರಬೇಕೆಂದು ಚಾರ್ಜ್ ಮಾಡುತ್ತೇನೆ. ಇವರು ಇವತ್ತು ಪಿ.ಡಬ್ಲ್ಯು.ಡಿ. ಕೋಡ್‌ನ ಎಲ್ಲೆಯನ್ನು ಮೀರಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಇದಕ್ಕೆ ಸರ್ಕಾರಕ್ಕೆ ನಾನು ಎಚ್ಚರಿಕೆಯನ್ನು ಕೊಡುತ್ತಿದ್ದೇನೆ. ತನ್ನ ಸ್ವಂತ ಆಸ್ತಿ, ತನ್ನ ತಂದೆ ತಾಯಿಗಳ ಆಸ್ತಿಯೆಂದು ತಿಳಿದುಕೊಂಡು ಸರ್ಕಾರದವರು ಸಿಕ್ಕಾಪಟ್ಟೆ ಖರ್ಚು ಮಾಡುತ್ತಿದ್ದಾರೆ. ಇವರು ಹೀಗೆ ಮಾಡಿದರೆ ನಾವು ಸುಮ್ಮನೆ ಇರುವುದಿಲ್ಲ.

ಇನ್ನು ಭದ್ರಾವತಿಯ ವಿಚಾರದಲ್ಲಿ ಮಾನ್ಯ ಶಿವಪ್ಪನವರು ಮತ್ತು ಸಿದ್ದವೀರಪ್ಪನವರು ಹೇಳಿದರು. ನಾನು ಅದರ ನಿಜಾಂಶವನ್ನು ಹೇಳುತ್ತೇನೆ. ಭದ್ರಾವತಿಯಲ್ಲಿ ಅವರಿಗೆ ಬೇಕಾಗಿರತಕ್ಕ ಒಬ್ಬ ಮನುಷ್ಯನನ್ನು ಅಲ್ಲಿ ಕಮರ್ಶಿಯಲ್ ಮ್ಯಾನೇಜರ್ ಆಗಿ ಸೇರಿಸಿದ್ದಾರೆ. ಅವರು ಮುಖ್ಯಮಂತ್ರಿಯವರ ಊರ ಕಡೆಯವರಂತೂ ಖಚಿತ. ಅವರು ಬಂದನಂತರ ಏನಾಯಿತು? ಅವರಿಗೆ ಐರನ್ನಿನ ಎ.ಬಿ.ಸಿ.ಡಿ. ಸಹ ಗೊತ್ತಿಲ್ಲ. ಸ್ಕ್ರಾಪ್ ಐರನ್ ಅಂದರೆ ಏನು ಎಂದು ಗೊತ್ತಿಲ್ಲ. ಅವರು ಮದ್ರಾಸ್‌ನಲ್ಲಿ ಓರ್ ಇನ್‌ಸ್ಪೆಕ್ಟ್ ಮಾಡುವುದಕ್ಕೆ ಹೋಗಿದ್ದರಂತೆ. ಅಲ್ಲಿ ಏನೂ ಗೊತ್ತಿರಲಿಲ್ಲ ಅವರಿಗೆ. ಅವರನ್ನು ನೋಡಿದರೆ, ವೈಸ್ ಛೇರ್‌ಮೇನ್ ಜನರಲ್ ಮ್ಯಾನೇಜರ್, ಇವರೆಲ್ಲರಿಗೂ ನಡುಕ. ಅವರು ಹೇಳಿದ್ದು ಆಗಲೇಬೇಕು. ತಮಿಳ್ನಾಡಿನ ಸ್ಟೀಲ್ ಸ್ಕ್ರಾಪ್ ಪಬ್ಲಿಸ್ಸಿ ಕಾರ್ಪರೇಷನ್ ಹಾಗೂ ಭಾರತ ಸ್ಟೀಲ್ ಪಬ್ಲಿಸ್ಸಿ ಕಾರ್ಪರೇಶನ್, ಇವರಿಂದ ಸುಮಾರು ಆರೂವರೆ ಲಕ್ಷ ಮತ್ತು ಎರಡೂವರೆ ಲಕ್ಷ ರೂಪಾಯಿ ಬಾಕಿ ಕೊಡಬೇಕಾಗಿತ್ತು.

Sri H. M. CHANNABASAPPA —I want to draw your attention to the fact that serious allegations are being made in this House. I do not see any Minister. Is this the way the Government should conduct

themselves? Who is to answer the very serious charges that are levelled against them? Yesterday the Hon. Chief Minister was pleased to ask Sri H. Siddaveerappa to give him specific instances of "Swajana Paksha-patha." Are we to speak to the empty benches?

Mr. DEPUTY SPEAKER.—Sri V. L. Patil, a Cabinet Minister, is present in the House. Some Ministers are in the Upper House.

ಶ್ರೀ ಎಸ್. ಚನ್ನಯ್ಯ.—ಅವರಿಗೆ ಸಪೋರ್ಟ್ ಮಾಡಬೇಡಿ. ಅವರನ್ನು ಕರೆಸಿ.

Sri H. M. CHANNABASAPPA.—Should not the concerned Ministers be present in the House? Is this the way of discharging their responsibility? Get the Ministers here. It is disgraceful that Ministers are not present when allegations are made against them. There are 29 Ministers; I don't mind doubling them to 58.

Mr. DEPUTY SPEAKER.—I have sent word. They will come. Hon, Minister Sri B. Rachaiah has just now come.

Sri R. DAYANAND SAGAR.—Serious charges are being made, I have also got seven charges. We don't want Tom, Dick and Harry to be here. Please do not take them so easy.

ಶ್ರೀ ಎಚ್. ಎನ್. ನಂಜೇಗೌಡ.—ಹೀಗೆ ಕಮರ್ಶಿಯಲ್ ಮ್ಯಾನೇಜರ್ ಬಂದನಂತರ ರಾಜಶೇಖರ ಮೂರ್ತಿಯವರೂ ನಿನ್ನಹಾಯಕರಾಗಿದ್ದಾರೆ. ಆ ಮನುಷ್ಯ ಎಲ್ಲಾ ಹುದ್ದೆಗಳನ್ನು ಆಕ್ರಮಣ ಮಾಡಿಕೊಂಡಿದ್ದಾನೆ. ಟೆಂಡರ್ ಕರೆದು ಒಂದು ಟನ್ನಿಗೆ 215,220 ರೂಪಾಯಿಗೆ ಕೊಡತಕ್ಕ ಕಾಲದಲ್ಲಿ ಕೋಟ್ಯಾಂತರ ರೂಪಾಯಿ ನಷ್ಟವನ್ನು ಮಾಡಿಕೊಂಡರು. ಟೆಂಡರ್ ಕೊಡುವವರಲ್ಲಿ ನೆಗೋಶಿಯೇಟ್ ಮಾಡಿ ಟನ್ನಿಗೆ 260 ರೂಪಾಯಿಯಂತೆ ಕೊಡತಕ್ಕ ಕಾರಣವೇನು? ಹೀಗೆ ಒಂದು ಟನ್ನಿಗೆ 30—40 ರೂಪಾಯಿ ಹೆಚ್ಚು ಇರಬೇಕಾದರೆ, ಏನು ಕಾರಣ? ಕಮರ್ಶಿಯಲ್ ಮ್ಯಾನೇಜರ್ ನೆಗೋಶಿಯೇಟ್ ಮಾಡುವುದಕ್ಕೆ ಯಾರು ಅಧಿಕಾರ ಕೊಟ್ಟರು? ಇವರು ಮುಖ್ಯ ಮಂತ್ರಿಯವರ ಪರವಾಗಿ ಹೋಗಿದ್ದಾರೆ. ಹೀಗಿರುವಾಗ ಇದರಲ್ಲಿ ಇವರಿಗೆ ಪಾಲು ಇಲ್ಲದೆ ಹೇಗೆ ನಡೆಯುತ್ತಿದೆ? ಪಿ.ಡಬ್ಲ್ಯು.ಡಿ. ಕೋಡ್ ಆಫ್ ರೂಲ್ಸ್ ಬಿಟ್ಟು ನಡೆಯುವುದಕ್ಕೆ ಕಾರಣವೇನು? ಇದರಲ್ಲಿ ಲಕ್ಷಾನುಗಟ್ಟಲೆ ದುಡ್ಡು ಹೊಡೆಯದಿದ್ದರೆ ಇದು ಸಾಧ್ಯ ಹೇಗೆ? ಕಾನೂನು ಮೀರಿ ನಡೆಯುತ್ತಿದ್ದಾಗ ಇವರು ಕಣ್ಣು ಮುಚ್ಚಿ ಕೂತಿದ್ದರೆ? ಯಾವ ಸರ್ಕಾರವೂ ಸುಮ್ಮನೆ ಕೂತು ಕೊಳ್ಳುವುದಿಲ್ಲ. ಮತ್ತು ಆ ಕಂಪೆನಿಯವರು 9 ಲಕ್ಷ ರೂಪಾಯಿಯ ಹಣವನ್ನು ವಾಪಸ್ಸು ಕೊಡುವುದಕ್ಕೆ ಒಪ್ಪಿ ಕಾಗದ ಬರೆದಿದ್ದಾರೆ. ಅವನ್ನು ಮಾನ್ಯ ರಾಜಶೇಖರಮೂರ್ತಿಯವರು ರಾಜೀನಾಮೆ ಕೊಡುವುದಾದರೆ ತೋರಿಸುತ್ತೇನೆ. ಅವರು ಕಾಗದ ಬರೆದು 6—7 ತಿಂಗಳು ಆಯಿತು. ಇನ್ನೂ ವಸೂಲು ಮಾಡುವುದಕ್ಕೆ ಕ್ರಮ ತೆಗೆದುಕೊಂಡಿಲ್ಲ. 9 ಲಕ್ಷ ಫ್ಯಾಕ್ಟರಿಗೆ ಬರಬೇಕಾದರೆ, ಅದರಲ್ಲಿ ಮೂರು ಲಕ್ಷವಾದರೂ ಇವರ ಜೇಬಿಗೆ ಬಂದಿರುತ್ತದೆ. ಅದಕ್ಕೆ ಇವರು ಸುಮ್ಮನಿರುತ್ತಾರೆ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ರಾಜ್ಯಪಾಲರು ರಾಜ್ಯಾಂಗದ 164 (1)ರ ವಿಧಿಯ ಪ್ರಕಾರ ಸರ್ಕಾರವನ್ನು ಡಿಸ್‌ಮಿಸ್ ಮಾಡಬಹುದು, ಅದಕ್ಕೆ ಅವಕಾಶ ಇದೆ. ಇವರ ಬಗ್ಗೆ ಕಲ್ಕತ್ತಾ ಹೈಕೋರ್ಟು ತೀರ್ಮಾನ ಕೊಟ್ಟಿದ್ದಾರೆ. ಇಂಥ ಭ್ರಷ್ಟಾಚಾರ ಸರ್ಕಾರವನ್ನು ಏಕೆ ಅವರು ಡಿಸ್‌ಮಿಸ್ ಮಾಡಿಲ್ಲ? ಅವರು ಒಂದು ವಾರ್ನಿಂಗ್ ಆದರೂ ಕೊಡಬಹುದಾಗಿತ್ತು. ಇವತ್ತಿನ ದಿವಸ ನಾನು ನನ್ನ ತೀರ್ಮಾನವನ್ನು ಹೇಳಬೇಕಾಗಿದೆ. ಇವತ್ತಿನ ದಿವಸ ನಮ್ಮ ಪಕ್ಷದ ಪರವಾಗಿ ಹೇಳಬೇಕಾದರೆ, ಭ್ರಷ್ಟಾಚಾರವನ್ನು ನಡೆಸತಕ್ಕ ಸರ್ಕಾರಕ್ಕೆ ನಾನೆಂದೂ ಸಹಕಾರ ಮಾಡತಕ್ಕವನಲ್ಲ. ಮಾನ್ಯ ರಾಜಗೋಪಾಲಾಚಾರಿ ಬಂದು ಹೇಳಿದರೂ ಮಾಡಲಿಕ್ಕಿಲ್ಲ.

3-30 P.M.

ನಿನ್ನೆ ತಾನೆ ಪತ್ರಿಕೆಯಲ್ಲಿ ಕೆಲವು ವಿಷಯಗಳು ಬಂದಿವೆ, ಶ್ರೀಮಾನ್ ಶಿವಪ್ಪನವರು ಅದನ್ನು ಪ್ರಸ್ತಾಪ ಮಾಡಿದ್ದಾರೆ. On a point of personal explanation. Everybody was taken by surprise ಎಂದು ಪತ್ರಿಕೆಯಲ್ಲಿ ಬಂದಿದೆ. ಸಭಾಪತಿಗಳ ವಿರುದ್ಧ ಸೂಚನೆ

(ಶ್ರೀ ಎಚ್. ಎನ್. ನಂಜೇಗೌಡ)

ಮುಂಡನೆಯಾಗುತ್ತದೆ ಎಂದು ಪತ್ರಿಕೆಗಳಲ್ಲೂ ಬಂದಿತ್ತು, ಮತ್ತು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲೂ ಸಹ ತೀರ್ಮಾನವಾಗಿತ್ತು. ಎಲ್ಲಾ ನಾಯಕರನ್ನೂ ಸಹ ನಾವು ಕೇಳಿಕೊಂಡಿದ್ದೆವು, ಬರಲಿಲ್ಲ ಎಂದರೆ ಅದಕ್ಕೆ ಏನು ಮಾಡುವುದು ? ಇದನ್ನು ಏಕೆ ಹೇಳಬೇಕಾಯಿತು ಎಂದರೆ ಜನ ಮಾತನಾಡುತ್ತಾ ಇದ್ದಾರೆ, ಚೀಫ್ ಮಿನಿಸ್ಟರು ಯಾರಿಗಾದರೂ ಹೇಳಿ ಏಜೆಂಟರ ಮುಖಾಂತರ ಕೆಲಸ ಮಾಡಿದ್ದಾರೆಯೋ ಏನೋ ಅಂತ. ಅವರಿಗೆ ಉತ್ತರ ಹೇಳುವುದು ಕಷ್ಟವಾಗಿದೆ. ನಮ್ಮ ಪಕ್ಷದವರೇ ಯಾರು ಇರಲಿಲ್ಲ ಎಂದು ಶಿವಪ್ಪನವರು ಹೇಳುತ್ತಾ ಇದ್ದರು, ಅವರೆಲ್ಲರ ಅಭಿಪ್ರಾಯವನ್ನು ಪಡೆದೇ ಮಾಡಿದ್ದರೂ ಕೂಡ ಈ ರೀತಿ ಆದದ್ದು ನನಗಂತೂ ಅರ್ಥವಾಗಿಲ್ಲ. ಇದು ನರ್ಪ್ರೈಸ್ ಆಗಿ ಬಂತು ಅಂತ ಕೆಲವರು ಅಂದರು ಅದು ಹೇಗೆ ಆಗುತ್ತದೆ, 15 ದಿವಸಗಳ ಮುಂಚೆಯೇ ಇದನ್ನೆಲ್ಲಾ ಯೋಚನೆ ಮಾಡಿ ಹೇಳುವುದಕ್ಕೆ ಆಗುತ್ತದೆಯೇ ? ಸಹಿ ಹಾಕದವರೂ ಕೂಡ ಬಂದಿಲ್ಲ ಎಂಬುದನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ತಮಗೆ ಎಲ್ಲ ತೊಂದರೆಯಾಗುತ್ತದೆಯೋ ಅಂತ ಹೇಳಿ ಈ ರೀತಿ ಕೆಲವರು ಮಾಡುವುದಾದರೆ ದೇಶ ಹಾಳಾಗುತ್ತದೆ ಎಂದು ವಿರೋಧ ಪಕ್ಷದ ಮುಖಂಡರಿಗೆ ಹೇಳುತ್ತೇನೆ.

ಕೊನೆಯದಾಗಿ ಒಂದು ಮಾತನ್ನು ಹೇಳಿ ಮುಗಿಸುತ್ತೇನೆ. ರಾಜ್ಯಪಾಲರು ಈ ರೀತಿ ಅಪ್ಪಣೆ ಕೊಡಿಸಿದ್ದಾರೆ :

> "It is the sagacity of the Members of the two Houses, their spirit of tolerance and their measure of attachment to ethical values which will play a crucial part in determining the extent to which democratic experiment in India will survive the present crisis." ಎಂಬುದಾಗಿ

ವಿರೋಧಪಕ್ಷದವರಿಗೆ ಅವರು ಪಾಠ ಹೇಳಬಹುದು. ಚೀಫ್ ಮಿನಿಸ್ಟರಿಗೆ ಪೊಲಿಟಿಕಲ್ ವ್ಯಾಲ್ಯೂಸ್ ಮೊರ್ಯಾಲಿಟಿ ಇದ್ದರೆ, ರಾಜಕೀಯ ಭ್ರಷ್ಟಾಚಾರ ಮಾಡಬಾರದು ಎಂದು ಅಭಿಪ್ರಾಯವಿದ್ದರೆ ಅದಕ್ಕೆ ಬೆನ್ನೆ ಕೊಡುವುದಾದರೆ ಅವರು ಈ ರೀತಿ ಸಣ್ಣ ತರಹದಲ್ಲಿ ಕೆಲಸ ಮಾಡಬಾರದಾಗಿತ್ತು. ತಮಗೆ ವಿರೋಧವಾಗಿರತಕ್ಕ ಗುಂಪನ್ನು ಒಡೆಯುವುದಕ್ಕೆ ಏನು ಕ್ರಮ ಕೈಕೊಳ್ಳುತ್ತಿದ್ದಾರೆ ಎಂಬುದು ಇದರಿಂದಲೇ ಕಾಣುಬರುತ್ತದೆ. ಮುಖ್ಯಮಂತ್ರಿಗಳ ಏಜೆಂಟು ಒಬ್ಬಿಬ್ಬರು ಇರಬಹುದು. We are not bothered. We do not recognise such blacksheep. I conclude my speech.

Death of an Employee of the H.M.T. at the E.S.I. Hospital, Bangalore

†Sri V. N. PATIL (Humnabad).—With the permission of the Chair I want to bring one incident to the notice of the House. An employee of H.M.T. was taken to the E.S.I. hospital with high fever. He was given penicillin injection and in a few minutes his life ended. I learn that hospital records are going to be tampered with. In order to deprive the dependents of the deceased any future compensation, the hospital authorities are trying to tamper with the records. Due to the utter negligence of the authorities the patient died. I want an explanation from the Government. I want an assurance from Government whetter they will seize the hospital records immediately. Since a valuable life has ended due to utter negligence and the carelessness of the hospital authorities, I want an assurance from the Government. If this